

ಮಾರ್ಚ್ 19, 2024ರ ಮುಂಜಾನೆ ಇಂಡೊನೇಷಿಯಾದ ಜಕಾರ್ತದಿಂದ ಕಾರಿನಲ್ಲಿ ಹೊರಟವರು, ಇಡೀ ದಿನ ಬೆಟ್ಟ ಕಣಿವೆಗಳ ನಡುವೆ ಇಕ್ಕಟ್ಟಿನ ಕಿರಿದು ರಸ್ತೆಗಳಲ್ಲಿ ಸುತ್ತಿಯೇ ಸುತ್ತುತ್ತಿದ್ದೇವೆ. 'ಇಗೋ ಬಂದಿತು, ಇನ್ನೇನು ಬಂದೇ ಬಿಟ್ಟಿತು' ಎನ್ನುತ್ತಲೇ ಗಂಟೆಗಟ್ಟಲೆ ಅಲೆದಾಡಿದ್ದೇವೆ. ಈ ಕ್ಷಣ ನಾವೆಲ್ಲಿದ್ದೇವೆ ಎಂದು ಕೂಡ ತಿಳಿಯದಾಗಿದೆ. ನಾವು ಹುಡುಕಿ ಹೊರಟ ವಿಸ್ಮಯದ ಗುಡ್ಡ 'ಗುನುಂಗ್ ಪದಾಂಗ್'ನ ಸುಳಿವೇ ಇಲ್ಲ.

## ಎಲ್ಲಾ ಆರಂಭವಾದದ್ದು ಹೀಗೆ...

ಫೆಬ್ರುವರಿ 2024, ವಾಟ್ಸ್ಆ್ಯಪ್‌ನಲ್ಲಿ ಒಂದು ಫೋಟೊ ತೂರಿ ಬಂತು. ನನ್ನ 'ಪೆರು' ಪುಸ್ತಕವನ್ನು ಮಾಚುಪಿಚುವಿನ ಎತ್ತರದಲ್ಲಿ ಹಿಡಿದು ತೆಗೆದ ಚಿತ್ರವದು. 'ನಿಮ್ಮ ಪೆರು ಪುಸ್ತಕವನ್ನು ಮಾಚುಪಿಚುವಿಗೆ ಕೊಂಡೊಯ್ದಿದ್ದೆ' ಎನ್ನುವ ಮಲ್ಲಿಕಾರ್ಜುನ ಡಿ.ಜಿ. ಅವರ ಸಂದೇಶ ಜೊತೆಗಿತ್ತು. ಕಾಲು ಶತಮಾನದ ಹಿಂದೆ ನಾನು ಪೆರುವಿಗೆ ಹೋದದ್ದು, ಈಗ ಮಾಚುಪಿಚು ಹೇಗಿರಬಹುದು ಎಂಬ ಕುತೂಹಲದಲ್ಲಿ 'ಮಾಚುಪಿಚು' ಪದವನ್ನು ಗೂಗಲ್ ಮಾಡಿದೆ. ಜಿಗಿದು ಬಂದ ನೂರೊಂದು ವೆಬ್‌ಸೈಟ್ ನಡುವೆ, 'ಮಾಚುಪಿಚು ಆಫ್ ಇಂಡೊನೇಷಿಯಾ' ಎಂಬ ಒಂದು ಶೀರ್ಷಿಕೆ ನನ್ನ ಕಣ್ಣು ಸೆಳೆಯಿತು. ಕುತೂಹಲದಿಂದ ತೆರೆದೆ, ಅಲ್ಲಿ ಮೊದಲ ಬಾರಿಗೆ 'ಗುನುಂಗ್ ಪದಾಂಗ್' ಬೆಟ್ಟದ ಹೆಸರನ್ನು ಓದಿದೆ. ಹೆಚ್ಚೇನೂ ವಿವರಗಳು ಅಲ್ಲಿರಲಿಲ್ಲ. ಈಗ ಗುನುಂಗ್ ಪದಾಂಗ್ ಬಗ್ಗೆ ಅಂತರ್ಜಾಲದಲ್ಲಿ ಹುಡುಕಾಡಿದೆ, ಅದು ಹೆಚ್ಚು ತಿಳಿದಿರದ ಪುರಾತತ್ತ್ವ ರಹಸ್ಯಗಳ ಕೌತುಕದ ಜಾಗ ಎಂದು ಅರಿವಾಯಿತು. ಈ ಗುಡ್ಡವನ್ನು ಕುರಿತಂತೆ ಇತಿಹಾಸಕಾರರ, ಭೂವಿಜ್ಞಾನಿಗಳ, ಪುರಾತತ್ತ್ವಶಾಸ್ತ್ರಜ್ಞರ ಅನೇಕ ಸಂಶೋಧನಾ ಪ್ರಬಂಧಗಳನ್ನು ಓದುತ್ತಿದ್ದಂತೆ ಕುತೂಹಲ ಕೆರಳಿತು. 'ಅದು ಗುಡ್ಡವಲ್ಲ, ಅದೊಂದು ಜ್ವಾಲಾಮುಖಿಯ ಮೇಲೆ ಕಡೆದು ನಿಲ್ಲಿಸಿದ ಮಾನವ ನಿರ್ಮಿತ ಇತಿಹಾಸಪೂರ್ವ ಪಿರಮಿಡ್! ಅದರ ಮೇಲೆ ಕುಳಿತಿದೆ ಬೆಟ್ಟದ ಶಿಖರದಲ್ಲೊಂದು ಮೆಗಲಿತಿಕ್ ತಾಣ' ಎಂಬಂತಹ ಸಂಶೋಧನಾ ಲೇಖನಗಳೂ ದೊರೆತವು. ಇವೆಲ್ಲವೂ ಇತ್ತೀಚಿನ ವರ್ಷಗಳ ಶೋಧ, ಬಹಳಷ್ಟು ವಾದ–ವಿವಾದ.

ಈ ಹುಡುಕಾಟದ ಸಮಯದಲ್ಲಿ, 'ಏನ್ಷಿಯೆಂಟ್ ಅಪೊಕಲಿಪ್ಸ್ – ದಿ ಲಾಸ್ಟ್ ಸಿವಿಲೈಸೇಶನ್' ಎಂಬ ವಿವಾದಕ್ಕೆ, ವಾಗ್ಯುದ್ಧಕ್ಕೆ ಸಿಕ್ಕಿಬಿದ್ದ ಡಾಕ್ಯುಮೆಂಟರಿ ನೋಡಿದೆ. ಅಲ್ಲಿ ಒಂದು ದೃಶ್ಯವಿದೆ, ಈ ವರದಿ ಚಿತ್ರದ ನಿರೂಪಕ, ಪತ್ರಕರ್ತ ಗ್ರಾಹಮ್ ಹ್ಯಾನ್‌ಕಾಕ್ ಮೆಲ್ಲನೆ ಪುರಾತನ ಶಿಲಾ ಮೆಟ್ಟಿಲುಗಳನ್ನು ಹತ್ತಿ ಮೇಲೆ ಬರುತ್ತಾರೆ, ಈಗ ಕ್ಯಾಮೆರಾ ಏಕ್‌ದಂ ಗುಡ್ಡದ ಮೇಲಿನ ಗುನುಂಗ್ ಪದಾಂಗ್‌ನ ಅದ್ಭುತದ ವಿಹಂಗಮ ನೋಟ ನೀಡುತ್ತದೆ. 'ಓಹ್!' ಎಂಬ ಉದ್ಗಾರ ನನ್ನಿಂದ ಹೊರಬಿದ್ದಿತ್ತು. ಆ ಕ್ಷಣವೇ ನಿರ್ಧರಿಸಿದ್ದೆ 'ನಾನಲ್ಲಿಗೆ ಹೋಗಬೇಕೆಂದು'.

## ಸಾವಿರಾರು ದ್ವೀಪಗಳ ನಾಡು

ಇಂಡೊನೇಷಿಯಾಗೆ ಪ್ರವಾಸ ಹೋದವರು ಬಹಳ ಜನರಿದ್ದಾರೆ, ಬಹುಪಾಲು ಪ್ರವಾಸ